# ಈ ಗೌತಮನ ಮುಖದಲ್ಲೇಕೆ ನಗುವಿಲ್ಲ ಎಂದರೆ...



ಭಾರತೀಯ ಕ್ರಿಕೆಟ್ ತಾರೆ ಗೌತಮ್ ಗಂಭೀರ್ ಸಾಗಿಬಂದ ಹಾದಿ ಸಲೀಸಾದುದೇನಲ್ಲ. ಅವರದ್ದು ಬೆವರಿನ ಹಾದಿ. ಪ್ರತಿಭೆಯಿಂದಲೇ ಸವಾಲುಗಳನ್ನು ಎದುರಿಸುತ್ತಾ ಬಂದ ಗಂಭೀರ್, ದಿಟ್ಟ ಆಟದಷ್ಟೇ ಬಿಚ್ಚು ಮನಸ್ಸಿನ ಮಾತುಗಳಿಗೂ ಹೆಸರಾದವರು. ವೃತ್ತಿಪರ ಕ್ರಿಕೆಟ್‌ಗೆ ನಿವೃತ್ತಿ ಹೇಳಿರುವ ಸಂದರ್ಭದಲ್ಲಿ ಹಿಂದಿರುಗಿ ನೋಡಿದರೆ, ಅಲ್ಲಿ ಕಾಣಿಸುವುದು ನಗುವನ್ನೇ ಮರೆತಂತೆ ಕಾಣಿಸುವ ಗಂಭೀರ ವದನದ ಸಾಧಕ ಗೌತಮ.

■ **ವಿಶಾಖ ಎನ್.**

ಚೆನ್ನಾಗಿ ನೆನಪಿದೆ. 2004ರ ನವೆಂಬರ್ 20–24. ಚಳಿ ಆಗಿನ್ನೂ ಕೈಚಾಚುತ್ತಿತ್ತು. ಕಾನ್ಪುರದ ಗ್ರೀನ್‌ಪಾರ್ಕ್‌ನ ದೊಡ್ಡ ಮೈದಾನ. ಒಂದು ತುದಿಯಿಂದ ಇನ್ನೊಂದು ತುದಿ ತಲುಪಲೇ ನಿಮಿಷಗಳು ಬೇಕು. ಅಲ್ಲಿ ದಕ್ಷಿಣ ಆಫ್ರಿಕಾದ ಶಾನ್ ಪೊಲಾಕ್, ಮಖಾಯ್ ಎಂಟಿನಿ ತರಹದ ಬೌಲರ್‌ಗಳು ತಡಕಿ ನೋಡಿಕೊಳ್ಳುವಂತೆ ವೀರೇಂದ್ರ ಸೆಹ್ವಾಗ್ ಹೊಡೆಯುತ್ತಿದ್ದರು. ಇನ್ನೊಂದು ಕಡೆ ಅವರದ್ದೇ ದೆಹಲಿಯ ಎಡಗೈ ಬ್ಯಾಟ್ಸ್‌ಮನ್ ಗೌತಮ್ ಗಂಭೀರ್.

ಸೆಹ್ವಾಗ್, ಗಂಭೀರ್ ಇಬ್ಬರಿಗೂ ಪ್ರಾಯದಲ್ಲಿ ಸರಿಯಾಗಿ ಎರಡು ವರ್ಷ ವ್ಯತ್ಯಾಸವಷ್ಟೆ. ವೀರೂ ಟೆಸ್ಟ್ ಕ್ರಿಕೆಟ್‌ಗೆ ಕಾಲಿಟ್ಟು ಅದಾಗಲೇ ಮೂರು ವರ್ಷ ಹಳಬರಾಗಿದ್ದರು. ಏಕದಿನದ ಪಂದ್ಯಗಳಲ್ಲಂತೂ ಇನ್ನೂ ಎರಡೂವರೆ ವರ್ಷ ಹೆಚ್ಚೇ ಅನುಭವ. ಗಂಭೀರ್ ಪರಿಸ್ಥಿತಿ ಹಾಗಿರಲಿಲ್ಲ. ಮುಂಬೈನಲ್ಲಿ ಆಸ್ಟ್ರೇಲಿಯಾ ಎದುರು ಮೊದಲ ಟೆಸ್ಟ್‌ನಲ್ಲಿ ಕಹಿ ಅನುಭವಿಸಿದ್ದರು. ಅದನ್ನು ಬೆನ್ನಿಗಿಟ್ಟುಕೊಂಡೂ 4 ಗಂಟೆ 9 ನಿಮಿಷ ಅಂಗಳದಲ್ಲಿ ನಿಂತರು. ವೀರೂವಿನ ಲೀಲಾಜಾಲ ಆಟವನ್ನು ನೋಡುತ್ತಲೇ ತಮ್ಮತನದ 'ಕಟ್'ಗಳನ್ನು ನಿಕಷಕ್ಕೆ